'ಅದು ಅವರ ಮದುವೆಯ ದಿನ ಅಕ್ಷತೆಗೆಂದು ಮಂಟಪಕ್ಕೆ ಕರೆದೊಯ್ಯಲು ಬಂದ ಅವರ ಸೋದರಮಾವ ಹೆಗಲ ಮೇಲೆ ಹೊದೆಸಿದ್ದ ಸೀರೆಯಂತೆ. ನನ್ನ ತವರಿನದಿದು, ಪುಟ್ಟಾ ಪೂರಾ ನನ್ನದು ಅಂತ ಅವರು ಅದನ್ನು ಕೆನ್ನೆಗೆ ಒತ್ತಿಕೊಂಡು ನಿಂತ ರೀತಿ ನೋಡಬೇಕಿತ್ತು ನೀನು. ನಂಗೆ ಮೈತುಂಬಾ ರೋಮಾಂಚನ ಆಯ್ತು ಗೊತ್ತಾ? ನೋಡು ಇನ್ನೂ ಇದೆ ಗೂಸ್ ಬಂಪ್ಸ್' ಅಂತ ಸೀತಾ ಕೈ ಸವರಿಕೊಂಡಿದ್ದಳು. 'ಕಂತೆಗೆ ತಕ್ಕ ಬೊಂತೆ ಸೆಂಟಿಮೆಂಟಲ್ ಫೂಲ್ಸು ಇಬ್ಬರೂ' ಅಂತ ಮೀರಾ ನಕ್ಕಿದ್ದಳು.

ಹಾಗೆ ನೋಡಿದರೆ ಸೀತಾ ಮತ್ತು ಸರಯೂ ಅವರ ನಡುವೆ ಮಾತಿಲ್ಲ ಕತೆಯಿಲ್ಲ, ಭಾಷಾ ಸಮಸ್ಯೆ ಅಂತಲ್ಲ. ಆಂಧ್ರದವಳಾದ್ರೂನೂ ಸೊಗಸಾದ ಕನ್ನಡ ಮಾತಾಡ್ತಾಳೆ ಸೀತಾ. ಆದರೆ, ಇವರದ್ದು ಬರೀ ಒನ್ ವೇ ಟ್ರಾಫಿಕ್ಕು. ತಾವೇನು ಹೇಳಬೇಕೆಂದಿದೆಯೋ ಪಟ ಪಟ ಒದರಿಬಿಡ್ತಾರೆ. ಅವಳು ಮಾತಾಡಿದ್ದು ಮಾತ್ರ ಗೋವಿಂದಾ! ಮುಂಚಿನಿಂದಲೂ ಕಿವಿ ಮಂದವಿದ್ದವರಿಗೆ ಈಗಂತೂ ತೀರ ಮಂದವಾಗಿಬಿಟ್ಟಿದೆ. ತುಂಬ ಜೋರಾಗಿ ಕೂಗಿ ಹೇಳಿದರೆ ಮಾತ್ರ ಕೇಳ್ತದೆ. ಯಾರಿಗಿದೆ ಅಷ್ಟು ಪುರುಸೊತ್ತು? ಹೀಗಾಗಿ ಪಾಪ ಹೊಟ್ಟೆಯ ಮಾತು ಯಾರೊಂದಿಗಾದರೂ ಹೇಳಲು ಚಡಪಡಿಸುತ್ತದೆ ಅವರ ಜೀವ. ಸೊಸೆ ಮೀರಳೋ ಅವರ ಹತ್ತಿರ ಮಾತಾಡುವ ಗೋಜಿಗೇ ಹೋಗೋಲ್ಲ. ಏನೋ ಹೇಳಬೇಕಾಗಿ ಬಂದಾಗ ಬಾಯಿಗೊಮ್ಮೆ ಕಿವಿಗೊಮ್ಮೆ ಕೈ ಬೆರಳು ಒತ್ತಿಕೊಳ್ಳುತ್ತಾ ಸನ್ನೆ ಮಾಡಿದರೆ ಹೀನಾಯವೆನ್ನಿಸಿಬಿಡುತ್ತದೆ ಸರಯೂಗೆ. 'ನಾನೇನು ಭಿಕ್ಷುಕಿಯಾ? ಇವಳು ಹೀಗೆ ಸುಡುಗಾಡು ಸನ್ನೆ ಮಾಡೋಕೆ? ಚೂರು ಒದರಿ ಹೇಳಲಿಕ್ಕೇನಿವಳಿಗೆ?' ಅಂತ.

ಅವಳು ಆಫೀಸಿಗೆ ಹೋಗಲೆಂದು ಕಾರಿನ ಕೀ ಕೈಗೆತ್ತಿಕೊಂಡು ಇನ್ನೇನು ಚಪ್ಪಲಿ ಮೆಟ್ಟಿಕೊಳ್ಳಬೇಕು ಅನ್ನುವಾಗ ಅಡುಗೆ ಮನೆಯ ಬಾಗಿಲಲ್ಲಿ ನಿಂತು 'ಮೀರಾ ಇವತ್ತು ಚಪಾತಿ ಆರು ಮಾಡಲೇ? ಎಂಟಾ?' ಅಂತ ಇವರು ಕೇಳೋದು 'ಎಂಟು ಮಾಡಿ' ಅಂತ ಅವಳು ಕೈ ಸನ್ನೆ ಮಾಡಿ ಹೇಳೋದು ದಿನದ ರಿವಾಜೇನೋ ಎಂಬಂತೆ ನಡೆಯುತ್ತದೆ. ಒಳಒಳಗೆ ಮೀರಾ 'ಏನೋ ಒಂದು ಮಾಡಿದ್ರಾಯ್ತು. ಸುಮ್ಮನೆ ದಿನಾ ಪ್ರಶ್ನೆ ಉತ್ತರ. ಕಿವಿ ನೋಡಿದ್ರೆ ಚೂರೂ ಕೇಳೋಲ್ಲ. ಒದರಿ ಒದರಿ ಗಂಟಲು ಹರ್ಕೋಬೇಕಾ ನಾನು? ಗೋಳು ಹೊಯ್ಕೊಳ್ಳೋಕ್ಕೆಂತಾನೇ ಆಡೋ ಆಟ ಇದು' ಅಂತ ಸಂತಾಪದಿಂದ ನಡುಗುತ್ತಾಳೆ. ಚೆನ್ನಾಗಿ ರೇಗಿ ಬಿಡಬೇಕು ಅಂತ ಬಾಯ್ದೆರೆಯುತ್ತಾಳೆ. ಮರುಕ್ಷಣ, 'ಪ್ರತಿಷ್ಠಿತ ಐಟಿ ಕಂಪನಿಯ ಎಚ್. ಆರ್. ಹೆಡ್ಡು, ರೇಗಿ ಕೂಗಾಡ್ಲಿಕ್ಕೇನು ನಾನು ಸಡಕ್ ಛಾಪಾ?' ಅಂತ ತನಗೆ ತಾನೇ ಹೇಳಿಕೊಂಡು ತುಟಿ ಬಿಗಿದುಕೊಂಡು ಸೆರಗು ಬೀಸುತ್ತಾ ಹೊರನಡೆದರೆ ಒಳತಿರುಗಿದ ಸರಯೂ ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತಾರೆ.

'ನಾನು ಈ ಮನೆಯ ಜನರ ಹೊಟ್ಟೆ ತುಂಬಿಸುವವಳು. ನಿಮ್ಮ ಗಡಿಬಿಡಿಯ ದಿನಚರಿಯಲ್ಲಿ ನನ್ನ ಪಾತ್ರಾನೂ ಮುಖ್ಯ ಉಂಟು' ಅಂತ ಹೇಳುವ ಅಮ್ಮನ ಪರಿ ಇದು ಅಂತ ರವಿಗೆ ತಿಳಿಯೋದಿಲ್ಲ ಅಂತಲ್ಲ. ಆದರೆ, ನಿತ್ಯ ನಡೆವ ಈ ಸಮರದಲ್ಲಿ ಯಾರ ಪಕ್ಷ ವಹಿಸಿದರೂ ಇನ್ನೊಬ್ಬರು ಬೆಂಕಿ ಉಗುಳ್ತಾರೆ ಅಂತ ಬಲ್ಲವನ ತುಟಿ ಯಾವತ್ತೂ ಝಿಪ್ಡ್.

ಹಾಗೆ ಸರಯೂಗೆ ಬಾಲ್ಯದಿಂದಲೇ ವರ್ಷಕ್ಕೊಮ್ಮೆ ಶ್ರಾವಣದಲ್ಲಿ ಕಿವಿ ಸೋರೋದೇ. ಅದೇನು ಸೋಂಕಾಗಿತ್ತೋ ಯಾರಿಗೆ ಗೊತ್ತು? ನಲ್ವತ್ತಾಗುವಷ್ಟರಲ್ಲಿ ಕೂಗಿದರೆ ಕೇಳೇ ಇಲ್ಲದಂತೆ ನಿಂತಲ್ಲೇ ನಿಲ್ಲತೊಡಗಿದವರ ಮೇಲೆ ಗಂಡ ಕೇಶವ ಒದರಾಡುವ ಪ್ರಸಂಗಗಳು ಸಿಕ್ಕಾಪಟ್ಟೆ ಹೆಚ್ಚಾಗಿಬಿಟ್ಟಿದ್ದವು. ಆದರೂ ಯಾರಿಗೂ ಪರಿಸ್ಥಿತಿ ಇಷ್ಟು ಹದಗೆಟ್ಟಿರಬಹುದು ಅಂತ ಹೊಳೆದಿರಲೇ ಇಲ್ಲ. ಸ್ವತಃ ಸರಯೂ ಕೂಡಾ 'ಇವರಿಗೆಲ್ಲ ಬಯ್ಯಲೊಂದು ಕಾರಣ ಬೇಕಷ್ಟೆ. ಇಲ್ಲಾಂದ್ರೆ ಏನೋ ಕೇಳಿದರೆ ಏನೋ ಜವಾಬು ಹೇಳಲು ನನಗೇನು ಹುಚ್ಚೆ?' ಅಂತ ನಂಬಿಕೊಂಡುಬಿಟ್ಟಿದ್ದರು. ಒಂದಿನ ಕೇಶವ, 'ಅದೆಂಥ ಸೊಕ್ಕೆ ನಿಂಗೆ? ಇಲ್ಲೇ ಅಡುಗೆಮನೆಯಲ್ಲಿದ್ದೀಯಾ. ತಲೆಬಾಗಿಲಿಗೆ ನಿಂತು ಹೂಸು ಬಿಟ್ಟರೂ ಇಲ್ಲಿಗೆ ಕೇಳುತ್ತೆ. ಅಂಥದ್ದರಲ್ಲಿ ನಾ ಗಂಟಲು ಹರಕೊಳ್ಳುವಂತೆ 'ಒಂದು ಚೆಂಬು ನೀರು ತಾರೇ' ಅಂತ ಕೂಗಿದ್ದೇ ಕೇಳಿಲ್ಲ ಅಂತೀಯಲ್ಲಾ. ನಿನ್ನ ದೆಸೆಯಿಂದ ಮೈಲಿಗೆ